ಓ.ಎಸ್.ನಂ.124/2021

ಡಿ ಡಬ್ಲ್ಯೂ: 3

ದಿನಾಂಕ 22.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನನಗೆ ಮೂಲ ವಾದಿಯ ಪರಿಚಯ ಇರುತ್ತದೆ. ಆತನ ಹೆಂಡತಿ ಭರಮವ್ವಳನ್ನು ನೋಡಿರುತ್ತೇನೆ. ನನಗೆ ಪ್ರತಿವಾದಿಗಳ ಪರಿಚಯ ಇರುತ್ತದೆ. ಇವರೆಲ್ಲರೂ ನನಗೆ ಸುಮಾರು ವರ್ಷಗಳಿಂದ ಪರಿಚಯ ಇರುತ್ತದೆ. ನಾನು ದಾವಾ ಆಸ್ತಿಯನ್ನು ನೊಡಿರುತ್ತೇನೆ. ದಾವಾ ಆಸ್ತಿಯ ಸಂಖ್ಯೆ ನನಗೆ ನೆನಪಿಲ್ಲ. ದಾವಾ ಆಸ್ತಿ ಮೂಲತಃ ವಾದಿಯ ತಂದೆ ಮರಿಯಪ್ಪನ ಆಸ್ತಿಯ ಆಗಿರುತ್ತದೆ ಎಂದರೆ ಸರಿ. ಮರಿಯಪ್ಪನಿಗೆ ಮೂಲ ವಾದಿ ಒಬ್ಬನೇ ಗಂಡು ಮಗ ಎಂದರೆ ಸರಿ. ದಾವಾ ಆಸ್ತಿ ಮರಿಯಪ್ಪನ ಮರಣದ ನಂತರ ಮೂಲ ವಾದಿಯ ಹೆಸರಿಗೆ ಖಾತಾ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ.

**2.** ದಾವಾ ಆಸ್ತಿಯಲ್ಲಿ 1 ಹಂಚಿನ ಮನೆ ಮತ್ತು ಖುಲ್ಲಾ ಜಾಗ ಹಾಗೂ ಇನ್ನೊಂದು ಖುಲ್ಲಾ ಜಾಗ ಇದೆ ಎಂದರೆ ಸರಿ. ಸದರಿ ಒಂದು ಖುಲ್ಲಾ ಜಾಗವನ್ನು ಮೂಲ ವಾದಿ ಮಾರಾಟ ಮಾಡಿರುತ್ತಾನೆ ಎಂದರೆ ಸರಿ. ಉಳಿದ ಆಸ್ತಿಯನ್ನು ಮೂಲ ವಾದಿ ಮತ್ತು ಇತರ ವಾದಿಗಳು ವಹಿವಾಟು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದೂರೆದು ದಾವಾ ಆಸ್ತಿಯನ್ನು ಒಂದನೇ ಪ್ರತಿವಾದಿಗೆ ಮಾರಾಟ ಮಾಡಿರುವುದಾಗಿ ನುಡಿಯುತ್ತಾರೆ.

**3.** ಮರಿಯಪ್ಪನಿಗೆ 2 ಜನ ಪತ್ನಿಯರು ಇರುವ ಬಗ್ಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ ಆದರೆ ಕೇಳಿ ತಿಳಿದುಕೊಂಡಿರುತ್ತೇನೆ. ಮರಿಯಪ್ಪನ 2ನೇ ಪತ್ನಿ ಸಾವಕ್ಕ ಮರಣ ಹೊಂದಿರುತ್ತಾರೆ. ಆಕೆಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಮರಿಯಪ್ಪನಿಗೆ ವಾದಿಯ ತಾಯಿ ಮಾತ್ರ ಒಬ್ಬಳೇ ಪತ್ನಿ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ನೆನಪಿಲ್ಲ.

**4.** ಮರಿಯಪ್ಪ 1ನೇ ಪ್ರತಿವಾದಿಗೆ ದಾವಾ ಆಸ್ತಿಯ ಹಕ್ಕು ಬಿಟ್ಟು ಕೊಟ್ಟಿರುವ ಕುರಿತು ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಸದರಿ ದಾಖಲೆ ಬರವಣಿಗೆ ಸಮಯದಲ್ಲಿ ನಾನು ಹಾಜರು ಇರಲಿಲ್ಲ ಆದರೆ ಖರೀದಿಯ ಸಮಯದಲ್ಲಿ ಹಾಜರಿದ್ದೇನು. ಸುಮಾರು 20 ವರ್ಷಗಳ ಹಿಂದೆ ಖರೀದಿ ಆಗಿದ್ದು ದಿನಾಂಕ ತಿಂಗಳು ನೆನಪಿಲ್ಲ. ಆ ಕುರಿತು ದಾಖಲೆಗಳು ಇವೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಆ ಕುರಿತು ಮಾಹಿತಿ ನೀಡಿರುತ್ತೇನೆ. ಸದರಿ ಖರೀದಿ ಪತ್ರವು ನೊಂದಣಿಯಾಗಿರುವ ಕುರಿತು ನನಗೆ ನೆನಪಿಲ್ಲ. ಸದರಿ ಖರೀದಿ ಪತ್ರವನ್ನು 100 ರೂಪಾಯಿ ಬಾಂಡ್ ಪೇಪರ್ ನಲ್ಲಿ ಬರೆದುಕೊಡಲಾಗಿರುತ್ತದೆ. ಸದರಿ ಪತ್ರಕ್ಕೆ ಸುಮಾರು 10-15 ಜನ ಸಹಿ

ಮಾಡಿರುತ್ತಾರೆ. ಅವರುಗಳ ಹೆಸರು ಹೇಳಲು ನನಗೆ ಈಗ ನೆನಪಿಲ್ಲ.

**5.** 1 ನೇ ಪ್ರತಿವಾದಿಗೆ ಯಾವುದೇ ಖರೀದಿ ಪತ್ರ ಬರೆದು ಕೊಡದಿದ್ದಗೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಹಕ್ಕು ಬಿಟ್ಟು ಕೊಟ್ಟ ಪತ್ರ ಬರೆದುಕೊಟ್ಟಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಸದರಿ ಪತ್ರ ಬರೆದುಕೊಟ್ಟಿರುವ ದಿನಾಂಕ ನನಗೆ ನೆನಪಿಲ್ಲ. ದಾವಾ ಆಸ್ತಿಯಿಂದ 2.5 ಕಿ ಮಿ ದೂರದಲ್ಲಿ ನನ್ನ ವಾಸದ ಮನೆ ಇರುತ್ತದೆ. ದಾವಾ ಆಸ್ತಿಯ ಅಕ್ಕ ಪಕ್ಕ ನನಗೆ ಸಂಬಂದಿಸಿದ ಯಾವುದೇ ಆಸ್ತಿಗಳು ಇರುವುದಿಲ್ಲ. ನಾನು ಮತ್ತು ಪ್ರತಿವಾದಿಗಳು ಅನ್ಯೋನ್ಯವಾಗಿ ಇದ್ದೇವೆ ಎಂದರೆ ಸರಿ. ನನಗೆ ಈ ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

Sd/-

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.